

ಬೇಸರವಾದಾಗ ಜೋಪಡಿ ಮುಂದೆ ವಾದ್ಯ ನುಡಿಸುವುದನ್ನು ಬಿಟ್ಟು ಬೇರೇನು ಮಾಡೋಣ ಹೇಳಿ....

ಮುಖಪುಟ ಲೇಖನ

## ಮದುವೆಗಳು ಹೇಗೆಲ್ಲಾ ಬದಲಾದವು!

ನವದೆಹಲಿಯ ಚೈತಾಲಿ ಪುರಿ ಹಾಗೂ ಚಂಡೀಗಢದ ನಿತಿನ್ ಅರೋರಾ ಅವರ ಮದುವೆಯ ಉದಾಹರಣೆಯನ್ನೇ ನೋಡಿ. ಅವರು ಕಳೆದ ಮೇ ತಿಂಗಳಿನಲ್ಲಿ ವೈಭವೋಪೇತ ಛತ್ರದಲ್ಲಿ ಸಪ್ತಪದಿ ತುಳಿಯಬೇಕಿತ್ತು. ಪಂಜಾಬಿ ಕುಟುಂಬಗಳ ಮದುವೆ ಎಂದರೆ ಕೇಳಬೇಕೇ? ವೈಭವದ ಸಮಾರಂಭಕ್ಕೆ ಭಾರೀ ಸಿದ್ಧತೆ ನಡೆದಿತ್ತು. ಮಾರ್ಚ್‌ನಲ್ಲಿ ಐಷಾರಾಮಿ ಹೋಟೆಲ್‌ವೊಂದರಲ್ಲಿ ನಡೆದ ನಿಶ್ಚಿತಾರ್ಥ ಸಮಾರಂಭದಲ್ಲಿ ಸುಮಾರು 170 ಜನ ಪಾಲ್ಗೊಂಡಿದ್ದರು. ಆ ಔತಣಕೂಟ ತಡರಾತ್ರಿಯವರೆಗೆ ನಡೆದಿತ್ತು. ಡಿಜೆಗಳ ಸಂಗೀತ ಮೇಳವೂ ಇದ್ದ ಆ ಸಮಾರಂಭದಲ್ಲಿ, ಮದ್ಯದ ಸಮಾರಾಧನೆ ಸಹ ಇತ್ತು. ಮೋಜು–ಮಸ್ತಿಗೆ ಅಲ್ಲಿ ಕೊರತೆ ಎನ್ನುವುದೇ ಇರಲಿಲ್ಲ.

ಮೇ 2ರಂದು ಮದುವೆ ಮಾಡಲು ನಿರ್ಧರಿಸಿದ್ದ ಹಿರಿಯರು, ಐಷಾರಾಮಿ ಛತ್ರವನ್ನೂ ಗೊತ್ತು ಮಾಡಿದ್ದರು. ವಿವಾಹಪೂರ್ವ ಕಾಕ್‌ಟೇಲ್ ಪಾರ್ಟಿಗೆ ದಿನ ನಿಗದಿಯಾಗಿತ್ತು. ಮದುವೆಯ ದಿನದ ಔತಣಕೂಟಕ್ಕೆ ಐದು ಪುಟಗಳ ಮೆನು ಸಿದ್ಧವಾಗಿತ್ತು. ಡಿಜೆಗಳನ್ನು ಬುಕ್ ಮಾಡಿ ಆಗಿತ್ತು. ಯಾರು, ಯಾರಿಗೆ ಆಮಂತ್ರಣ ನೀಡಬಹುದು ಎಂದು ಯೋಚಿಸಿ 500 ಅತಿಥಿಗಳ ಪಟ್ಟಿಯನ್ನೂ ಸಿದ್ಧಪಡಿಸಲಾಗಿತ್ತು. ಈ ಮಧ್ಯೆ ವಧು–ವರರ ಬಟ್ಟೆಗಳ ಖರೀದಿ ಪ್ರಕ್ರಿಯೆ ಮುಗಿದಿತ್ತು. ಸಾಂಪ್ರದಾಯಿಕ ಶೈಲಿಯ ಆಭರಣಗಳ ತಯಾರಿಗೆ 'ಆರ್ಡರ್' ಬೇರೆ ಕೊಟ್ಟಾಗಿತ್ತು. ಅಷ್ಟರಲ್ಲಿ ಕೊರೊನಾ ವೈರಸ್‌ನ ಅಬ್ಬರ ಕಾಣಿಸಿಕೊಂಡು, ಲಾಕ್‌ಡೌನ್ ಜಾರಿಯಾಯಿತು. ಲಾಕ್‌ಡೌನ್ ಇನ್ನೇನು ಮುಗಿಯಲಿದೆ ಎಂದು ಪುರಿ ಹಾಗೂ ಅರೋರಾ ಎರಡೂ ಕುಟುಂಬಗಳು ಕಾದಿದ್ದಾಯಿತು. ಆದರೆ, ಪ್ರಕರಣಗಳು ಒಂದೇ ಸಮನೆ ಹೆಚ್ಚುತ್ತಾ ಹೋಗಿ, ನಿರ್ಬಂಧಗಳು ಸಹ ಮುಂದುವರಿದ್ದರಿಂದ ಮದುವೆಯನ್ನು ನವೆಂಬರ್‌ಗೆ ಮುಂದೂಡುವುದೇ ಉಚಿತ ಎನ್ನುವ ನಿರ್ಧಾರಕ್ಕೆ ಎರಡೂ ಕುಟುಂಬಗಳು ಬಂದಿದ್ದಾಯಿತು.

ಚೈತಾಲಿ ಅವರ ತಂದೆ ಮೇ 1ರಂದು ಇದ್ದಕ್ಕಿದ್ದಂತೆ ನಿತಿನ್ ಅವರ ತಂದೆಗೆ ಫೋನ್ ಮಾಡಿದರು. 'ಮೇ 2ರಂದೇ ಮದುವೆ ಸಮಾರಂಭ ಮುಗಿಸಲು ಸಿದ್ಧವಿದ್ದರೆ ನನ್ನ ಬಳಿ ಕರ್ಫ್ಯೂ ಪಾಸ್‌ಗಳಿವೆ. ಚಂಡೀಗಢದಿಂದ ದೆಹಲಿಗೆ ಬಂದು ಶಾಸ್ತ್ರವನ್ನು ಮುಗಿಸಿಬಿಡಬಹುದು' ಎಂದು ಹೇಳಿದರು. ಅರೋರಾ ಕುಟುಂಬದಿಂದ ಒಪ್ಪಿಗೆ ಸಿಕ್ಕಿದ್ದೇ ತಡ, ರಾತ್ರೋರಾತ್ರಿ ಪುರೋಹಿತರನ್ನು ಹುಡುಕಿದ ಪುರಿ ಕುಟುಂಬ, ಮಿಕ್ಕ ಸಿದ್ಧತೆಗಳನ್ನೂ ತರಾತುರಿಯಲ್ಲಿ ಮಾಡಿಕೊಂಡಿತು.

'ನಮ್ಮ ಮನೆಯ ಪಡಸಾಲೆಯೇ ಮದುವೆಯ ಛತ್ರವಾಗಿ ಬದಲಾಯಿತು. ಅಮ್ಮನ ಗುಲಾಬಿ ಬಣ್ಣದ ರೇಷ್ಮೆ ಸೀರೆಯನ್ನು ನಾನು ಉಟ್ಟುಕೊಂಡೆ. ಅಜ್ಜಿಯ ಆಭರಣಗಳನ್ನು ತೊಟ್ಟುಕೊಂಡೆ. ನಿತಿನ್ ಅವರ ಸಹೋದರ ಫೋಟೊಗ್ರಾಫರ್‌ನ ಪಾತ್ರವನ್ನು ನಿಭಾಯಿಸಿದರು. ಸರಳ ಭೋಜನದ ವ್ಯವಸ್ಥೆ ಮಾಡಲಾಗಿತ್ತು. ಮದುವೆಯಲ್ಲಿ ಒಟ್ಟಾರೆ 16 ಜನ ಪಾಲ್ಗೊಂಡಿದ್ದರು' ಎಂದು ಚೈತಾಲಿ ವಿವರಿಸುತ್ತಾರೆ. ಜೂಮ್ ಲಿಂಕ್ ಮೂಲಕ ಕುಟುಂಬದ ಇತರ ಸದಸ್ಯರೆಲ್ಲ ತಮ್ಮ ಮನೆಯಲ್ಲೇ ಕುಳಿತು ಈ ಮದುವೆಯಲ್ಲಿ ಭಾಗಿಯಾದರಂತೆ. ನಿತಿನ್‌ಗೆ ಇಂತಹ ಸರಳ ಮದುವೆಯಿಂದ ತುಸು ಬೇಸರವಾದರೂ ನಿಗದಿತ ದಿನವೇ ಚೈತಾಲಿಯನ್ನು ಕೈಹಿಡಿದ ಸಮಾಧಾನ ಇದೆಯಂತೆ. ಇಂತಹ ನೂರಾರು ಕಥೆಗಳು ದೇಶದ ತುಂಬಾ ಹೆಜ್ಜೆಗೆ ಒಂದರಂತೆ ಸಿಗುತ್ತವೆ.